### ವಿದ್ಯುತ್ ಚಾಲಿತ ವಾಹನ ತಯಾರಿಕೆ • 55 ಸಾವಿರ ಮಂದಿಗೆ ಸಿಗಲಿದೆ ಉದ್ಯೋಗ

# ‘ಟೆಕೊ’ದಿಂದ ₹ 350 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ವಿದ್ಯುತ್ ಚಾಲಿತ ವಾಹನ ಕ್ಷೇತ್ರದಲ್ಲಿ ₹ 350 ಕೋಟಿ ಹೂಡಿಕೆಗೆ ಕೊರಿಯಾದ ಟೆಕೊ ಎಲೆಕ್ಟ್ರಿಕ್ ಕಂಪನಿ ಮುಂದೆ ಬಂದಿದೆ. ಬುಧವಾರ ಇಲ್ಲಿ ನಡೆದ ವಿದ್ಯುತ್ ವಾಹನ ಶೃಂಗ ಸಭೆಯಲ್ಲಿ ಕಂಪನಿಯ ಅಧ್ಯಕ್ಷ ಜಾರ್ಜ್ ಲಿನ್ ಈ ಇಂಗಿತ ವ್ಯಕ್ತಪಡಿಸಿದರು.

ಭಾರತೀಯ ವಾಣಿಜ್ಯ ಸಂಸ್ಥೆ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಆಶ್ರಯದಲ್ಲಿ ಈ ಶೃಂಗ ಸಭೆ ನಡೆಯಿತು.

ಕಂಪನಿ ಈಗಾಗಲೇ ದೇವನಹಳ್ಳಿಯ ಕೈಗಾರಿಕಾ ಪ್ರದೇಶದಲ್ಲಿ ‘ಸೆಂಚುರಿ ಡೆವಲಪ್‌ಮೆಂಟ್ ಕಾರ್ಪೊರೇಷನ್’ನ ಹೆಸರಿನ ಘಟಕ ಹೊಂದಿದೆ. ವಿದ್ಯುತ್ ವಾಹನಗಳ ತಯಾರಿಕೆ, ನಿರ್ವಹಣೆ, ಸಂಶೋಧನೆ ಮತ್ತು ಅಭಿವೃದ್ಧಿ ಇಲ್ಲಿ ನಡೆಯಲಿದೆ ಎಂದು ಕೈಗಾರಿಕಾ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ದೇಶದಲ್ಲಿ ಒಟ್ಟಾರೆ ₹ 2 ಲಕ್ಷ ಕೋಟಿ ಮೊತ್ತವನ್ನು ವಿದ್ಯುತ್ ವಾಹನ ಕ್ಷೇತ್ರದಲ್ಲಿ ಹೂಡಿಕೆ ಮಾಡಲಾಗುತ್ತದೆ. ರಾಜ್ಯದಲ್ಲಿ ₹ 30 ಸಾವಿರ ಕೋಟಿ ಹೂಡಿಕೆ ಮಾಡಲಾಗುತ್ತದೆ. ಇದು 55 ಸಾವಿರ ಮಂದಿಗೆ ಉದ್ಯೋಗ ಕಲ್ಪಿಸಲಿದೆ’ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

‘ಈ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ವಿಶ್ವದ ಮೂರು ಪ್ರಮುಖ ರಾಷ್ಟ್ರಗಳಲ್ಲಿ ಭಾರತವೂ ಒಂದಾಗಬೇಕು’ ಎಂದು ಸಚಿವರು ಆಶಿಸಿದರು.

ವಿದ್ಯುತ್ ವಾಹನಗಳ ತಯಾರಿಕಾ ಘಟಕಗಳಿಗೆ ಬೇಕಾದ ಮೂಲಸೌಲಭ್ಯ ಒದಗಿಸುವುದು, ತ್ರಿಚಕ್ರ ವಾಹನಗಳನ್ನು ಖಾಸಗಿ ಬಳಕೆಗೂ (ಸ್ವಂತ ಬಳಕೆಗೆ) ನೀಡುವುದು, ವಾಣಿಜ್ಯ ವಾಹನಗಳನ್ನು ತೆರಿಗೆ ಮುಕ್ತಗೊಳಿಸುವುದು, ಚಾರ್ಜಿಂಗ್ ಪಾಯಿಂಟ್‌ಗಳ ವಿಸ್ತರಣೆ, ಅದಕ್ಕಾಗಿ ವಿದ್ಯುತ್ ಪ್ರಸರಣ ಕಂಪನಿಗಳ ಸಹಯೋಗ, ಬಿಡಿ ಭಾಗಗಳ ಬೆಲೆ ಇಳಿಕೆ, ಪಾರ್ಕಿಂಗ್‌ಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸುವುದು ಸೇರಿದಂತೆ ಹಲವು ಉತ್ತೇಜನಕಾರಿ ಕ್ರಮಗಳನ್ನು ಕೈಗೊಳ್ಳುವ ಪ್ರಸ್ತಾವ ಸರ್ಕಾರದ ಮುಂದಿದೆ ಎಂದು ಅಧಿಕಾರಿಗಳು ಹೂಡಿಕೆದಾರರಿಗೆ ಮಾಹಿತಿ ನೀಡಿದರು.



ಶೃಂಗಸಭೆಯಲ್ಲಿ ಪ್ರದರ್ಶನಕ್ಕಿಟ್ಟಿದ್ದ ವಿದ್ಯುತ್ ಚಾಲಿತ ವಾಹನಗಳು– ಪ್ರಜಾವಾಣಿ ಚಿತ್ರ

#### ವಾಹನಗಳ ಪ್ರದರ್ಶನ

ಶೃಂಗಸಭೆಯಲ್ಲಿ ನಗರದಲ್ಲೇ ಆರಂಭವಾದ ಸನ್ ಮೊಬಿಲಿಟಿ ಕಂಪನಿಯು ಬ್ಯಾಟರಿ ಸ್ವಾಪಿಂಗ್ ಘಟಕ ಪ್ರದರ್ಶಿಸಿತು. ವಾಹನದ ಬ್ಯಾಟರಿ ಚಾರ್ಜ್ ಖಾಲಿಯಾದ ಬಳಿಕ ಅದನ್ನು ಈ ಘಟಕಕ್ಕೆ ನೀಡಬೇಕು. ಅಲ್ಲಿ ಪೂರ್ಣ ಚಾರ್ಜ್ ಆದ ಬ್ಯಾಟರಿಯನ್ನು ವಿನಿಮಯ ಮಾಡಲಾಗುತ್ತದೆ. ಇದಕ್ಕೆ ಘಟಕದವರು ಕನಿಷ್ಠ ದರ ವಿಧಿಸುತ್ತಾರೆ. ಪೆಟ್ರೋಲ್ ಬಂಕ್‌ಗಳ ಮಾದರಿಯಲ್ಲಿ ಎಲ್ಲ ಕಡೆ ಈ ಸ್ವಾಪಿಂಗ್ ಘಟಕಗಳು ಇರಲಿವೆ. ಅಶೋಕ್ ಲೇಲ್ಯಾಂಡ್ ತನ್ನ ಬಸ್‌ಗಳಿಗೆ ಬೇಕಾದ ಬ್ಯಾಟರಿ ವ್ಯವಸ್ಥೆಯನ್ನು ಈ ಕಂಪನಿಯಿಂದಲೇ ಪಡೆಯುತ್ತಿದೆ.

ಆಟೊರಿಕ್ಷಾಗಳು ಸಂಪೂರ್ಣ ಬ್ಯಾಟರಿ ಚಾಲಿತವನ್ನಾಗಿ ಪರಿವರ್ತನೆಗೊಂಡ (ರೆಟ್ರೊ ಫಿಟ್) ಮಾದರಿಗಳೂ ಇದ್ದವು.

### ಶಿವಮೊಗ್ಗದ ವಕೀಲ ವಿನೋದ್ ಅವರಿಂದ ಪಿಐಎಲ್

# ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷ ಸ್ಥಾನಕ್ಕೆ ಮುಸ್ಲಿಮರ ನೇಮಕ: ಅಹವಾಲು ಮರು ಆಲಿಕೆ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

**ಬೆಂಗಳೂರು:** ‘ರಾಜ್ಯ ಅಲ್ಪಸಂಖ್ಯಾತರ ಆಯೋಗಕ್ಕೆ ಮುಸ್ಲಿಂ ಸಮುದಾಯದವರನ್ನೇ ಅಧ್ಯಕ್ಷರನ್ನಾಗಿ ನೇಮಕ ಮಾಡುವುದನ್ನು ಸಮರ್ಥಿಸಿಕೊಂಡು ಅಂಗೀಕರಿಸಲಾಗಿದ್ದ ನಿರ್ಣಯವನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಾಪಸು ಪಡೆದುಕೊಳ್ಳಲಾಗುವುದು’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಕುರಿತಂತೆ ಶಿವಮೊಗ್ಗದ ವಕೀಲ ಬಿ.ವಿನೋದ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ರವಿ ಮಳಿಮಠ ಹಾಗೂ ನ್ಯಾಯಮೂರ್ತಿ ಬಿ.ಎಂ.ಶ್ಯಾಮಪ್ರಸಾದ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಿದ್ದ ವಕೀಲರು, ‘ಈ ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿದಾರರ ಮನವಿಯನ್ನು ಹೊಸದಾಗಿ ಪರಿಗಣಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು’ ಎಂದು ನ್ಯಾಯಪೀಠಕ್ಕೆ ವಿವರಿಸಿದರು.


‘ಆಯೋಗಕ್ಕೆ ಕೇವಲ ಮುಸ್ಲಿಮರನ್ನೇ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತಿದೆ. ಸರತಿ ಆಧಾರದಲ್ಲಿ ಇತರೆ ಅಲ್ಪಸಂಖ್ಯಾತ ಸಮುದಾಯಗಳಿಗೂ ಅವಕಾಶ ಕಲ್ಪಿಸಲು ನಿರ್ದೇಶಿಸಬೇಕು’ ಎಂಬುದು ಅರ್ಜಿದಾರರ ವಾದ.

‘ಅಲ್ಪಸಂಖ್ಯಾತ ಸಮುದಾಯಗಳಾದ ಕ್ರಿಶ್ಚಿಯನ್, ಜೈನ್, ಬೌದ್ಧ ಮತ್ತು ಸಿಖ್ ಸಮುದಾಯಕ್ಕೆ ಸೇರಿದವರಿಗೂ ಸರತಿ ಆಧಾರದ ಮೇಲೆ ಅವಕಾಶ ನೀಡಬೇಕು’ ಎಂದು ವಿನೋದ್ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಮನವಿ ಸಲ್ಲಿಸಿದ್ದರು. ಆ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದ ಕಾರಣ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ವಿಚಾರಣೆ ನಡೆಸಿದ್ದ ನ್ಯಾಯಪೀಠ, ‘ಅರ್ಜಿದಾರರ ಮನವಿ ಪರಿಗಣಿಸಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಿ’ ಎಂದು ನಿರ್ದೇಶಿಸಿ ಅರ್ಜಿ ಇತ್ಯರ್ಥಪಡಿಸಿತ್ತು. ಇದರ ಅನುಸಾರ ಅರ್ಜಿದಾರರ ಮನವಿ ಆಲಿಸಿದ್ದ ಇಲಾಖೆ, ಆಯೋಗಕ್ಕೆ ಮುಸ್ಲಿಂ ಸಮುದಾಯದ ವ್ಯಕ್ತಿಗಳನ್ನು ಮಾತ್ರ ಅಧ್ಯಕ್ಷರನ್ನಾಗಿ ನೇಮಕ ಮಾಡುವುದನ್ನು ಸಮರ್ಥಿಸಿಕೊಂಡಿತ್ತು.

‘ರಾಜ್ಯದಲ್ಲಿರುವ ಆರು ಅಲ್ಪಸಂಖ್ಯಾತ ಸಮುದಾಯಗಳಲ್ಲಿ ಮುಸ್ಲಿಮರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಹೀಗಾಗಿ ರಾಜ್ಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷ ಸ್ಥಾನಕ್ಕೆ ಮುಸ್ಲಿಂ ಸಮುದಾಯದ ವ್ಯಕ್ತಿಗಳನ್ನೇ ನೇಮಕ ಮಾಡುವುದು ರೂಢಿಗತ ಪದ್ಧತಿಯಾಗಿ ನಡೆದುಕೊಂಡು ಬಂದಿದೆ’ ಎಂದು 2017ರ ಜುಲೈ 14ರಂದು ನಿರ್ಧಾರ ಕೈಗೊಳ್ಳಲಾಗಿತ್ತು.

ಈ ನಿರ್ಧಾರವನ್ನು ಮತ್ತೆ ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ಅರ್ಜಿದಾರರ ಪರ ಎಂ.ಅರುಣ್ ಶ್ಯಾಮ್ ವಾದ ಮಂಡಿಸಿದರು.

*Conditions apply • Follow us on:
To know more, log on to tanishq.co.in
or give a missed call on 1800 3010 5002.


### ಯುಗಾದಿ ತನಕ ಸರ್ಕಾರಕ್ಕೆ ಏನೂ ಆಗದು: ರೇವಣ್ಣ


# ಹೊಸ ಪಂಚಾಂಗ ನೋಡಿ ಮೈತ್ರಿ ಸರ್ಕಾರದ ಭವಿಷ್ಯ ಹೇಳುವೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಯುಗಾದಿ ಬಳಿಕ ಹೊಸ ಪಂಚಾಂಗ ನೋಡಿ ಮೈತ್ರಿ ಸರ್ಕಾರದ ಭವಿಷ್ಯ ಹೇಳುತ್ತೇನೆ’ ಎಂದು ಲೋಕೋಪಯೋಗಿ ಸಚಿವ ಎಚ್.ಡಿ.ರೇವಣ್ಣ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಕರ್ನಾಟಕ ಹಾಗೂ ತಮಿಳುನಾಡಿನ ಪಂಚಾಂಗ ನೋಡಿದ್ದೇನೆ. ಸರ್ಕಾರಕ್ಕೆ ಏನೂ ಆಗುವುದಿಲ್ಲ. ಬಜೆಟ್ ಮಂಡನೆ ಮಾಡುತ್ತಿರುವ ದಿನ (ಫೆ.8) ಅತ್ಯುತ್ತಮವಾಗಿದೆ. ಯುಗಾದಿ ತನಕ ಎಂಥದ್ದೂ ಆಗುವುದಿಲ್ಲ’ ಎಂದರು.

‘ತಮಿಳುನಾಡಿನ ಪಂಚಾಂಗ ನೋಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ಎಸ್. ಯಡಿಯೂರಪ್ಪ ಆಪರೇಷನ್ ಕಮಲ ಕೈಬಿಟ್ಟಿದ್ದಾರೆ. ಕೇರಳದಲ್ಲಿ ದೇವರನ್ನು ಕೇಳಿದ್ದಾರೆ. ಆದರೆ, ಅಲ್ಲಿಯೂ ಹೂವು ಕೊಟ್ಟಿಲ್ಲ. ಬಳಿಕ ಮೌನಕ್ಕೆ ಶರಣಾಗಿದ್ದಾರೆ. ಕುಮಾರಸ್ವಾಮಿ ಐದು ವರ್ಷ ಆಡಳಿತ ನಡೆಸುತ್ತಾರೆ’ ಎಂದು ಭವಿಷ್ಯ ಹೇಳಿದರು.


ಎಚ್‌.ಡಿ.ರೇವಣ್ಣ

‘ಮಾಜಿ ಸಚಿವ ಬಸವರಾಜ ರಾಯರಡ್ಡಿ ಅವರ ಬಂಡವಾಳ ನನಗೆ ಗೊತ್ತಿದೆ. ರಾಜ್ಯದಲ್ಲಿ ಅತ್ಯಧಿಕ ಸಂಖ್ಯೆಯ ಪಿಯು ಕಾಲೇಜುಗಳನ್ನು ಆರಂಭಿಸಿದವರು ಅವರು. ಅವರು ಹೇಗೆ ಕೆಲಸ ಮಾಡಿದ್ದಾರೆ ಎಂಬುದು ಗೊತ್ತಿದೆ. ರಾಯರಡ್ಡಿ ಅವರಿಂದ ಕುಮಾರಸ್ವಾಮಿ ಕಲಿಯಬೇಕಾದ ಅಗತ್ಯವಿಲ್ಲ’ ಎಂದರು.

‘ನಾನು ಹಾಗೂ ರಾಜಶೇಖರ ಪಾಟೀಲ ಒಟ್ಟಿಗೆ ಉಡುಪಿಗೆ ಹೋಗಿದ್ದೆವು. ಅಲ್ಲಿ ಡೈರಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಮೋದ್ ಮಧ್ವರಾಜ್ ಮನೆಯಲ್ಲಿ ಊಟ ಮಾಡಿದ್ದೇವೆ. ಅಲ್ಲಿಂದ ಸೀದಾ ಬೆಂಗಳೂರಿಗೆ ಬಂದಿದ್ದೇನೆ. ಯಡಿಯೂರಪ್ಪ ಅವರನ್ನು ಭೇಟಿ ಮಾಡಿಲ್ಲ. ಅಭಿವೃದ್ಧಿ ಕೆಲಸದಲ್ಲಿ ನಾನು ಹಾಗೂ ಕುಮಾರಸ್ವಾಮಿ ಕಿತ್ತಾಡುತ್ತೇವೆ. ಆದರೆ, ಬಿಜೆಪಿ ಮನೆ ಬಾಗಿಲಿಗೆ ಹೋಗುವ ಪ್ರಮೇಯ ಇಲ್ಲ. ದೇವೇಗೌಡರು ಹಾಗೂ ಕುಮಾರಸ್ವಾಮಿ ಹೇಳಿದಂತೆ ನಡೆಯುತ್ತೇನೆ’ ಎಂದು ಅವರು ಸ್ಪಷ್ಟಪಡಿಸಿದರು.

‘ಮಾಜಿ ಸಚಿವ ಎ.ಮಂಜು ಈ ಹಿಂದೆ ಬಿಜೆಪಿಯಲ್ಲಿದ್ದರು. ಈಗ ಕಾಂಗ್ರೆಸ್‌ನಲ್ಲಿದ್ದಾರೆ. ಎರಡೂ ಪಕ್ಷಗಳನ್ನು ನೋಡಿದವರು. ಅವರ ಬಗ್ಗೆ ಪ್ರತಿಕ್ರಿಯೆ ನೀಡುವ ಶಕ್ತಿಯಿಲ್ಲ’ ಎಂದು ವ್ಯಂಗ್ಯವಾಡಿದರು.

### ‘ಕೇಂದ್ರ ಸರ್ಕಾರದಿಂದ ಐತಿಹಾಸಿಕ ನಿರ್ಧಾರ’


ಎಸ್‌.ಎಂ.ಕೃಷ್ಣ

**ಬೆಂಗಳೂರು:** ಅಯೋಧ್ಯೆಯಲ್ಲಿ ವಿವಾದರಹಿತ 67 ಎಕರೆ ಜಾಗವನ್ನು ರಾಮ ಮಂದಿರ ನಿರ್ಮಾಣಕ್ಕೆ ಬಿಟ್ಟುಕೊಡಲು ಅನುಮತಿ ನೀಡುವಂತೆ ಸುಪ್ರೀಂ ಕೋರ್ಟ್ ಮೊರೆ ಹೋಗಲು ನಿರ್ಧರಿಸಿರುವ ಕೇಂದ್ರ ಸರ್ಕಾರದ ನಡೆಯನ್ನು ಬಿಜೆಪಿ ಹಿರಿಯ ಮುಖಂಡ ಎಸ್.ಎಂ. ಕೃಷ್ಣ ಸ್ವಾಗತಿಸಿದ್ದಾರೆ.

‘ರಾಮ ಮಂದಿರ ನಿರ್ಮಾಣಕ್ಕೆ ಮುಂದಾಗಿರುವ ವಿಶ್ವ ಹಿಂದೂ ಪರಿಷತ್ ಮತ್ತು ಇತರ ಸಂಘಟನೆಗಳಿಗೆ ವಿವಾದರಹಿತ ಜಮೀನು ಹಸ್ತಾಂತರಿಸಲು ಕೇಂದ್ರ ಮುಂದಾಗಿರುವುದು ಐತಿಹಾಸಿಕ ತೀರ್ಮಾನ. ಕೋಟ್ಯಂತರ ಜನರ ಭಾವನೆಗಳಿಗೆ ಈ ಮೂಲಕ ನರೇಂದ್ರ ಮೋದಿ ಸರ್ಕಾರ ಸ್ಪಂದಿಸಿ, ಗೌರವ ನೀಡಿರುವುದು ಎಲ್ಲರೂ ಮೆಚ್ಚುವಂಥ ಸಂಗತಿ’ ಎಂದೂ ಅವರು ಹೇಳಿದ್ದಾರೆ.


**ಟೀಂಲೀಸ್ ಸರ್ವೀಸಸ್ ಲಿಮಿಟೆಡ್**

TeamLease™ Putting India to Work

ನೋಂದಾಯಿತ ಕಚೇರಿ: 6ನೆಯ ಮಹಡಿ, ಬಿಎಂಟಿಸಿ ವಾಣಿಜ್ಯ ಸಂಕೀರ್ಣ, 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು 560095.
CIN: L74140KA2000PLC118395
ಈ–ಮೇಲ್: corporateaffairs@teamlease.com, ವೆಬ್‌ಸೈಟ್: www.teamleasegroup.com

**2018ರ ಡಿಸೆಂಬರ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದ ಹಾಗೂ ಒಂಬತ್ತು ತಿಂಗಳ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶ.**

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕಿಗಳು ಲಕ್ಷ ರೂಪಾಯಿಗಳಲ್ಲಿ)

| ವಿವರಗಳು | ಕ್ರೋಢೀಕೃತ | | ಪ್ರತ್ಯೇಕ | |
|---|---|---|---|---|
| | 31.12.2018 ಕ್ಕೆ ಕೊನೆಗೊಂಡ 3 ತಿಂಗಳ | 31.12.2017 ಕ್ಕೆ ಕೊನೆಗೊಂಡ ತತ್ಸಮಾನ 3 ತಿಂಗಳ | 31.12.2018 ಕ್ಕೆ ಕೊನೆಗೊಂಡ ತತ್ಸಮಾನ 3 ತಿಂಗಳ | 31.12.2017 ಕ್ಕೆ ಕೊನೆಗೊಂಡ ತತ್ಸಮಾನ 3 ತಿಂಗಳ |
| | ಅಪರಿಶೋಧಿತ | ಅಪರಿಶೋಧಿತ | ಅಪರಿಶೋಧಿತ | ಅಪರಿಶೋಧಿತ |
| ಕಾರ್ಯಾಚರಣೆಗಳಿಂದ ಒಟ್ಟು ಆದಾಯ | 1,17,585.82 | 92,229.35 | 1,09,680.74 | 86,597.94 |
| ನಿವ್ವಳ (ನಷ್ಟ)/ಲಾಭ (ತೆರಿಗೆ ಕಳೆಯುವ ಮುನ್ನ)* | 2,437.11 | 1,887.25 | 2,498.46 | 1,754.57 |
| ನಿವ್ವಳ (ನಷ್ಟ)/ಲಾಭ (ತೆರಿಗೆ ಕಳೆದ ನಂತರ)* | 2,525.99 | 1,839.83 | 2,534.48 | 1,800.03 |
| ಒಟ್ಟು ಸಮಗ್ರ (ನಷ್ಟ)/ಆದಾಯ [ತೆರಿಗೆ ಕಳೆದ ನಂತರದ ಸಮಗ್ರ (ನಷ್ಟ)/ಲಾಭ ಮತ್ತು ತೆರಿಗೆ ಕಳೆದ ನಂತರದ ಇತರ ಸಮಗ್ರ (ನಷ್ಟ)/ಲಾಭವೂ ಸೇರಿದೆ] | 2,537.05 | 1,858.89 | 2,535.85 | 1,807.70 |
| ಪೂರ್ಣ ಪಾವತಿ ಸಂದಿರುವ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂಗಳು) | 1,709.68 | 1,709.68 | 1,709.68 | 1,709.68 |
| ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು) – ಹಿಂದಿನ ವರ್ಷದ ಪರಿಶೋಧಿತ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವಂತೆ | 42,457.04 | 34,925.12 | 41,556.43 | 34,127.59 |
| (ತಲಾ 10 ರೂ.ಗಳ) (ವಾರ್ಷಿಕೀಕರಿಸಿಲ್ಲ) ಪ್ರತಿ ಷೇರಿಗೆ ಗಳಿಕೆ/(ನಷ್ಟ) (‘ಇಪಿಎಸ್’) | | | | |
| (ಎ) ಮೂಲ | 14.77 | 10.76 | 14.82 | 10.53 |
| (ಬಿ) ಡೈಲ್ಯೂಟೆಡ್ | 14.77 | 10.76 | 14.82 | 10.53 |

* ಮೇಲೆ ತಿಳಿಸಿರುವ ಅವಧಿಗಳಲ್ಲಿ ಯಾವುದೇ ಅಸಾಧಾರಣ ಐಟಂಗಳು ಇರಲಿಲ್ಲ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಆಂಡ್ ಡಿಸ್ಕ್ಲೋಸರ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ (“ವಿಧಾಯಕಗಳು”) ನಿಬಂಧನೆ 33 ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಲಾಗಿರುವ, 2018ರ ಡಿಸೆಂಬರ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದ ಅಪರಿಶೋಧಿತ ವಿತ್ತೀಯ ಫಲಿತಾಂಶಗಳ ಸಾರಾಂಶವನ್ನು ಮಾತ್ರ ಮೇಲೆ ನೀಡಲಾಗಿದೆ. ಅಪರಿಶೋಧಿತ ಪ್ರತ್ಯೇಕ ಹಾಗೂ ಕ್ರೋಢೀಕೃತ ವಿತ್ತೀಯ ಫಲಿತಾಂಶಗಳು ಸ್ಟಾಕ್ ಎಕ್ಸ್‌ಚೇಂಜಿನ ಜಾಲತಾಣಗಳಲ್ಲಿ: BSE (www.bseindia.com) & NSE (www.nseindia.com) ಹಾಗೂ ಕಂಪನಿಯ ಜಾಲತಾಣದಲ್ಲಿ (www.teamleasegroup.com) ಲಭ್ಯವಿದೆ.

ಟೀಂಲೀಸ್ ಸರ್ವೀಸಸ್ ಲಿಮಿಟೆಡ್‌ನ ನಿರ್ದೇಶಕ ಮಂಡಲಿಗಾಗಿ ಮತ್ತು ಅದರ ಪರವಾಗಿ
(ಸಹಿ/–)
**ಅಶೋಕ್ ಕುಮಾರ್ ನೆಡುರುಮಲ್ಲಿ**
ವ್ಯವಸ್ಥಾಪಕ ನಿರ್ದೇಶಕರು
DIN : 00151814

ದಿನಾಂಕ: 2019ರ ಜನವರಿ 29
ಸ್ಥಳ: ಬೆಂಗಳೂರು



**ಸಾರ್ವಜನಿಕ ಪ್ರಕಟಣೆ**

ನಾವು, ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ), ಸ್ಥಳೀಯ ಪ್ರಧಾನ ಕಛೇರಿ, #65, ಸಂತ ಮಾರ್ಕರ್ ರಸ್ತೆ, ಬೆಂಗಳೂರು–560001, ಜಾಲತಾಣ www.sbihousing.com ಅನ್ನು ಹೊಂದಿರುವ ಬೆಂಗಳೂರು ರಿಯಲ್ ಎಸ್ಟೇಟ್ ಕಂಪನಿ (ಬಿಆರ್‌ಸಿ) ಯಿಂದ ಉದ್ದೇಶಪೂರ್ವಕವಾಗಿ ಪ್ರಾರಂಭಿಸಲ್ಪಟ್ಟ ರಾಜನಕುಂಟೆ, ದೊಡ್ಡಬಳ್ಳಾಪುರ ಮುಖ್ಯ ರಸ್ತೆಯಲ್ಲಿರುವ ಎಸ್‌ಬಿಐ ಗ್ರೀನ್ ಟೌನ್ ಮತ್ತು ವಿಶ್ವನಾಥಪುರ, ದೇವನಹಳ್ಳಿ, ಬೆಂಗಳೂರಿನಲ್ಲಿರುವ ಎಸ್‌ಬಿಐ ನ್ಯೂ ಬೆಂಗಳೂರು. ಈ ಎರಡೂ ಗೃಹ ಯೋಜನೆಗಳೊಂದಿಗೆ ಎಸ್‌ಬಿಐಗೆ ಯಾವುದೇ ಸಂಬಂಧವಿಲ್ಲ ಎಂದು ಸಾರ್ವಜನಿಕರಿಗೆ ಈ ಮೂಲಕ ಸೂಚಿಸಿದೆ. ಈ ಜಾಲತಾಣ ಎಸ್‌ಬಿಐನ ಅಧಿಕೃತ ಜಾಲತಾಣವಲ್ಲ ಎಂದು ನಾವು ಸ್ಪಷ್ಟಪಡಿಸುತ್ತೇವೆ. ಸಾಮಾಜಿಕ ಮಾಧ್ಯಮ ಮತ್ತು ಅಂತರ್ಜಾಲದಲ್ಲಿ ಚಲಾವಣೆಯಲ್ಲಿರುವ ಇಂತಹ ಜಾಹೀರಾತುಗಳಿಂದ ಸಾರ್ವಜನಿಕರು ಮೋಸಹೋಗಬಾರದೆಂದು ಎಚ್ಚರಿಸುತ್ತೇವೆ. ಒಂದುವೇಳೆ ಸಾರ್ವಜನಿಕರು ಇಂತಹ ಜಾಹೀರಾತುಗಳಿಗೆ ಬಲಿಯಾದಲ್ಲಿ ಆಗುವ ಯಾವುದೇ ನಷ್ಟ ಅಥವಾ ಹಾನಿಗಳಿಗೆ ಎಸ್‌ಬಿಐ ಜವಾಬ್ದಾರರಾಗಿರುವುದಿಲ್ಲ. ಅನುಮತಿ ಇಲ್ಲದೆ ಎಸ್‌ಬಿಐ ಬ್ರಾಂಡ್ ಹೆಸರನ್ನು ದುರುಪಯೋಗಪಡಿಸಿಕೊಂಡಿರುವುದಕ್ಕೆ ಮೇಲಿನ ಬಿಲ್ಡರ್ / ಸೊಸೈಟಿಯ ವಿರುದ್ಧ ಸೂಕ್ತ ಕಾನೂನು ಕ್ರಮವನ್ನು ಪ್ರಾರಂಭಿಸುವ ಪ್ರಕ್ರಿಯೆಯಲ್ಲಿದ್ದೇವೆ.


### ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಚಾಲನೆ

**ದಾಬಸ್‌ಪೇಟೆ:** ನೆಲಮಂಗಲ ತಾಲ್ಲೂಕಿನ ಇಮಚೇನಹಳ್ಳಿ ಪಾಳ್ಯ, ಬೆಟ್ಟದ ಹೊಸಹಳ್ಳಿ, ಹಾಲೇನಹಳ್ಳಿ, ಮಾಕೇನ ಹಳ್ಳಿ ಹಾಗೂ ಹೆಗ್ಗುಂದ ಗ್ರಾಮಗಳ ದಲಿತ ಕಾಲೊನಿಗಳಲ್ಲಿ ಎಸ್.ಜೆ.ಪಿ ಯೋಜನೆಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ಶ್ರೀನಿವಾಸಮೂರ್ತಿ ಇತ್ತೀಚೆಗೆ ಚಾಲನೆ ನೀಡಿದರು.

‘ಕಾಮಗಾರಿ ಗುಣಮಟ್ಟ ಕಾಪಾಡಬೇಕು’ ಎಂದು ಗುತ್ತಿಗೆದಾರಿಗೆ ಶಾಸಕರು ಎಚ್ಚರಿಕೆ ನೀಡಿದರು.

‘₹ 35 ಲಕ್ಷ ವೆಚ್ಚದ ಈ ಕಾಮಗಾರಿಯಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ನಿರ್ಮಾಣ ಮಾಡಲಾಗುವುದು’ ಎಂದು ಲೋಕೋಪಯೋಗಿ ಇಲಾಖೆ ಎಂಜಿನಿಯರ್ ಉಮೇಶ್ ಹೇಳಿದರು.

# ಸರ್ಕಾರಿ ರಜೆ ಕಡಿತ: ಸಂಪುಟ ಉಪಸಮಿತಿ ಸಭೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರ್ಕಾರಿ ರಜೆಗಳ ಸಂಖ್ಯೆ ಕಡಿತಗೊಳಿಸುವ ಕುರಿತು ಪರಿಶೀಲಿಸಲು ರಚನೆಯಾಗಿರುವ ಸಚಿವ ಸಂಪುಟ ಉಪಸಮಿತಿ ಬುಧವಾರ ಮೊದಲ ಸಭೆ ನಡೆಸಿತು. ವಿವಿಧ ವರ್ಗಗಳಿಂದ ಅಭಿಪ್ರಾಯ ಸಂಗ್ರಹಿಸಿದ ಬಳಿಕ ಅಂತಿಮ ವರದಿ ನೀಡಲು ಸಮಿತಿ ನಿರ್ಧರಿಸಿದೆ.

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಕೃಷ್ಣ ಬೈರೇಗೌಡ ನೇತೃತ್ವದಲ್ಲಿ ಉಪಸಮಿತಿ ರಚಿಸಲಾಗಿದೆ.



ಸರ್ಕಾರಿ ನೌಕರರಿಗೆ ವರ್ಷಕ್ಕೆ 100ಕ್ಕೂ ಅಧಿಕ ರಜೆಗಳು ಸಿಗುತ್ತವೆ. 54 ವಾರದ ರಜಾ ದಿನಗಳು, 12 ಎರಡನೇ ಶನಿವಾರ ಹಾಗೂ 21 ಸಾರ್ವತ್ರಿಕ ರಜಾ ದಿನಗಳು ಬರುತ್ತವೆ. 19 ಸಾಂದರ್ಭಿಕ ರಜೆಗಳು ಇವೆ. ರಜಾ ದಿನಗಳ ಸಂಖ್ಯೆ ವಿಪರೀತವಾಗಿದೆ ಎಂಬ ಭಾವನೆ ಇದೆ. ಇದರಿಂದ ಆಡಳಿತದ ಮೇಲೆ ಪರಿಣಾಮ ಬೀರುತ್ತದೆ ಎಂಬ ಭಾವನೆಯೂ ಇದೆ ಎಂದು ಸಭೆಯಲ್ಲಿ ಚರ್ಚಿಸಲಾಯಿತು ಎಂದು ಗೊತ್ತಾಗಿದೆ.

ವರ್ಷಕ್ಕೆ 15 ದಿನ ಇರುವ ಸಾಂದರ್ಭಿಕ ರಜೆಯನ್ನು 8ಕ್ಕೆ ಇಳಿಸಿ, ತಿಂಗಳ ನಾಲ್ಕನೇ ಶನಿವಾರ ರಜೆ ನೀಡಲು ಹಾಗೂ ವಿವಿಧ ಭತ್ಯೆಗಳನ್ನು ಹೆಚ್ಚಿಸಲು ಆರನೇ ವೇತನ ಆಯೋಗ ಶಿಫಾರಸು ಮಾಡಿತ್ತು. ಈ ಬಗ್ಗೆಯೂ ಚರ್ಚೆ ನಡೆಯಿತು.

‘ವಿವಿಧ ಸಮುದಾಯಗಳು, ಸರ್ಕಾರಿ ನೌಕರರ ಸಂಘಟನೆ, ಸಾರ್ವಜನಿಕ ಆಡಳಿತ ಕ್ಷೇತ್ರದ ತಜ್ಞರ ಜತೆಗೆ ಸಮಾಲೋಚನೆ ನಡೆಸಿ ಅಂತಿಮ ವರದಿ ನೀಡಲಾಗುತ್ತದೆ’ ಎಂದು ಸಮಿತಿಯ ಸದಸ್ಯರೊಬ್ಬರು ತಿಳಿಸಿದರು. ಈ ಸಮಿತಿಯ ಶಿಫಾರಸು 2019–20 ವರ್ಷದಿಂದ ಜಾರಿಗೆ ಬರಲಿದೆ.

# ಚುಕುಬುಕು ಎನ್ನುತ್ತಿಲ್ಲ ಪುಟಾಣಿ ರೈಲು...!

### ಹಳಿ ನಿರ್ವಹಣೆ ಕಾರ್ಯ ಚುರುಕು: ಶೀಘ್ರವೇ ಸೇವೆ ಆರಂಭದ ನಿರೀಕ್ಷೆ

• ಕಲಾವತಿ ಬೈಚಬಾಳ

**ಬೆಂಗಳೂರು:** ರಜೆ ದಿನಗಳು ಬಂದರೆ ಸಾಕು ಪುಟಾಣಿಗಳೆಲ್ಲ ಹೆಜ್ಜೆ ಹಾಕುವುದು ಕಬ್ಬನ್ ಉದ್ಯಾನದಲ್ಲಿರುವ ಬಾಲಭವನದತ್ತ. ಪುಟಾಣಿ ರೈಲು ಇಲ್ಲಿನ ಕೇಂದ್ರಬಿಂದು. ಆದರೆ, ಸದ್ಯ ರೈಲು ಚುಕುಬುಕು ಎನ್ನದೆ ಸ್ಥಗಿತಗೊಂಡಿದೆ.

ಪುಟ್ಟ ರೈಲಿನ ಹಳಿಗಳು ತುಕ್ಕು ಹಿಡಿದು ತುಂಬಾ ದಿನಗಳಾಗಿದ್ದವು. ಹಾಗಾಗಿ, ಹಳಿ, ಸೇತುವೆಗಳ ದುರಸ್ತಿ ಕಾಮಗಾರಿಗಳು ನಡೆಯುತ್ತಿರುವುದರಿಂದ ರೈಲು ಚಾಲನೆಯಲ್ಲಿ ಇಲ್ಲ. ಬಾಲಭವನದ ಪ್ರವೇಶ ದ್ವಾರದ ಬಳಿ ‘ಪುಟಾಣಿ ರೈಲು, ಹಳಿ ನಿರ್ವಹಣೆಯ ಕಾಮಗಾರಿಯಿಂದಾಗಿ ಚಾಲನೆಯಲ್ಲಿಲ್ಲ’ ಎಂಬ ಸೂಚನಾ ಫಲಕವನ್ನು ಹಾಕಲಾಗಿದೆ.

‘ರೈಲು ಹಳಿ, ಹಳಿಯ ಸಿ–ಬೆಂಡ್, ಮೂಲೆಗಳ ದುರಸ್ತಿ, ಸೇತುವೆ ಬಳಿಯ 20 ವುಡನ್ ಸ್ಲಿಪರ್ಸ್‌ಗಳ ಬದಲಿ ಜೋಡಣೆ, ಸೇತುವೆ ಸುತ್ತಮುತ್ತಲಿನ ಜಾಗದಲ್ಲಿ ದುರಸ್ತಿ ಕಾಮಗಾರಿಗಳು ನಡೆಯುತ್ತಿವೆ’ ಎಂದು ಬಾಲಭವನ ಸೊಸೈಟಿಯ ಕಾರ್ಯದರ್ಶಿ ರತ್ನಾ ಬಿ.ಕಲಮದಾನಿ ತಿಳಿಸಿದರು.

‘ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ರೈಲು ಹಳಿಗಳ ದುರಸ್ತಿ ಕಾರ್ಯ ಮಾಡಿಕೊಡಬೇಕೆಂದು ರೈಲ್ವೆ ಇಲಾಖೆಗೆ ಕಳೆದ ವರ್ಷ ಪತ್ರ ಬರೆಯಲಾಗಿತ್ತು. ಇದಕ್ಕೆ ಸ್ಪಂದಿಸಿದ ಇಲಾಖೆ ಅಧಿಕಾರಿಗಳು ಬಾಲಭವನಕ್ಕೆ ಭೇಟಿ ನೀಡಿ, ಪರಿಶೀಲಿಸಿದ್ದರು. ಅದರ ಮುಂದುವರಿದ ಭಾಗವಾಗಿ ಈ ದುರಸ್ತಿ ಕಾರ್ಯ ನಡೆಯುತ್ತಿದೆ’ ಎಂದು ಹೇಳಿದರು.

**ಪಾಲಕರಿಗೂ ನಿರಾಸೆ:** ‘ನಮ್ಮ ಸಂಬಂಧಿಕರೊಬ್ಬರ ಮದುವೆ ಮುಗಿಸಿಕೊಂಡು ಮಕ್ಕಳನ್ನು ನೇರವಾಗಿ ಬಾಲಭವನಕ್ಕೆ ಕರೆದುಕೊಂಡು ಬಂದೆವು. ಮಕ್ಕಳನ್ನು ತುಸು ಹೊತ್ತು ಇಲ್ಲೇ ಆಟವಾಡಿಸಿಕೊಂಡು ಹೋಗೋಣವೆಂದು ಬಂದಿದ್ದೆವು. ಆದರೆ, ಮಕ್ಕಳನ್ನು ರೈಲಿನಲ್ಲಿ ಕೂಡಿಸಿ, ಆಟವಾಡಿಸಲು ಸಾಧ್ಯವಾಗಲಿಲ್ಲ’ ಎಂದು ಕೆ.ಆರ್. ಪುರದ ತೆಲ್ಮಾ ಹೇಳಿದರು. ‘ರೈಲು ಆಟವಾಡೋಣವೆಂದು ನಾವು ಇಲ್ಲಿಗೆ ಬಂದಿದ್ದೇವೆ. ಆದರೆ, ರೈಲು ಓಡುತ್ತಿಲ್ಲ ಎಂದು ಸೆಕ್ಯೂರಿಟಿ ಅಂಕಲ್ ಹೇಳಿದಾಗ ತುಂಬಾ ನಿರಾಸೆಯಾಯ್ತು’ ಎಂದು ತೆಲ್ಮಾ ಅವರ ಮಕ್ಕಳು ಬೇಸರ ವ್ಯಕ್ತಪಡಿಸಿದರು.

**ರೈಲು ಹಳಿಗಳ ಸುತ್ತ ಕಸವೋ ಕಸ:** ಬಾಲಭವನ ಆವರಣದ ಸಭಾಂಗಣದ ಹಿಂಭಾಗದ ಸ್ಥಿತಿಯಂತೂ ಹೇಳತೀರದು. ಪುಟಾಣಿ ರೈಲು ಓಡಾಡುವ ಪಕ್ಕದ ಜಾಗದಲ್ಲೆಲ್ಲ ಕಸದ ರಾಶಿಯೇ ರಾರಾಜಿಸುತ್ತಿದೆ.

**ಕಾರಂಜಿಯಲ್ಲಿ ಹೂಳು:** ಆವರಣದಲ್ಲಿರುವ ಸಭಾಂಗಣದ ಎದುರಿನ ಪುಟ್ಟ ಕಾರಂಜಿ ಜಾಗದ ಸುತ್ತಮುತ್ತಲೆಲ್ಲ ಸುಮಾರು ದಿನಗಳಿಂದ ಪಾಚಿ ಕಟ್ಟಿಕೊಂಡಿದೆ. ಕಾರಂಜಿ ಚಾಲನೆಯಲ್ಲಿ ಇದೆಯೋ, ಇಲ್ಲವೊ ಎಂದು ಪ್ರಶ್ನೆ ಹುಟ್ಟುವ ಮಟ್ಟಿಗೆ ಕೊಳಚೆ ಆವರಿಸಿಕೊಂಡಿದೆ.

ಈ ಬಗ್ಗೆ ಅಲ್ಲಿನ ಸಿಬ್ಬಂದಿಯನ್ನು ಪ್ರಶ್ನಿಸಿದರೆ, ‘ಮೊನ್ನೆಯಷ್ಟೇ ಶುಚಿ ಮಾಡಿದ್ದೇವೆ. ಈಗ ಮತ್ತೆ ಶುಚಿ ಮಾಡಬೇಕು’ ಎಂದು ಪ್ರತಿಕ್ರಿಯಿಸಿದರು.


ಪುಟಾಣಿ ರೈಲು ಹಳಿಯ ನಿರ್ವಹಣೆ ಕಾಮಗಾರಿಯಲ್ಲಿ ತೊಡಗಿರುವ ಕಾರ್ಮಿಕರು –ಪ್ರಜಾವಾಣಿ ಚಿತ್ರಗಳು/ ರಂಜು.ಪಿ



**11** ಎಕರೆ — ಬಾಲ ಭವನದ ಒಟ್ಟು ವಿಸ್ತೀರ್ಣ

**1.2** ಕಿ.ಮೀ — ರೈಲು ಹಳಿಯ ಉದ್ದ

**₹5** ರೈಲಿನಲ್ಲಿ ಪ್ರಯಾಣಿಸಲು ಮಕ್ಕಳಿಗೆ ಟಿಕೆಟ್ ದರ

**₹10** 6 ವರ್ಷ ಮೇಲ್ಪಟ್ಟವರಿಗೆ ಪ್ರವೇಶ ಶುಲ್ಕ

**₹20** ರೈಲಿನಲ್ಲಿ ಪ್ರಯಾಣಿಸಲು ವಯಸ್ಕರಿಗೆ ಟಿಕೆಟ್ ದರ

### ‘ಕೊಳದಲ್ಲಿ ತುಂಬಿದ ಹೂಳು, ದೋಣಿ ವಿಹಾರ ಸ್ಥಗಿತ’

ಬಾಲಭವನ ಆವರಣದಲ್ಲಿರುವ ಕೊಳದಲ್ಲಿ ಸುಮಾರು ವರ್ಷಗಳಿಂದ ಹೂಳು ತುಂಬಿಕೊಂಡಿದ್ದರೂ ಹೂಳೆತ್ತಲು ಬಾಲಭವನ ಸೊಸೈಟಿ ಕ್ರಮ ಕೈಗೊಂಡಿಲ್ಲ.


ಕೊಳದ ಆಳದಲ್ಲಿ ಕಳೆ ಗಿಡಗಳು ಬೆಳೆದಿದ್ದು, ಸುತ್ತಮುತ್ತ ಪಾಚಿ ಆವರಿಸಿಕೊಂಡಿದ್ದರಿಂದ ಅಲ್ಲಿನ ಎರಡು ದೋಣಿಗಳು ಕಾರ್ಯನಿರ್ವಹಿಸಲಾಗದೆ ಮೂಲೆಯಲ್ಲಿ ನಿಂತಿವೆ.

ತೆರವಾಗದ ಬಿದಿರಿನ ಮೆಳೆ: ‘ಕೊಳದ ಸುತ್ತಮುತ್ತಲಲ್ಲಿ ಹಾಗೂ ಆವರಣದಲ್ಲಿ ಬಹುತೇಕ ಬಿದಿರಿನ ಮೆಳೆಗಳು ಒಣಗಿ ನಿಂತಿವೆ. ಕೆಲವು ಬೀಳುವ ಸ್ಥಿತಿಯಲ್ಲಿವೆ. ಮಕ್ಕಳು ಆಡುವಾಗ ಬಿದ್ದರೆ ಏನು ಗತಿ’ ಎಂದು ಪ್ರವಾಸಿಗರೊಬ್ಬರು ಆತಂಕ ವ್ಯಕ್ತಪಡಿಸಿದರು.

‘ಮಕ್ಕಳ ಹಬ್ಬದ ಸಮಯದಲ್ಲಿ ದೋಣಿ ವಿಹಾರಕ್ಕೆ ಅವಕಾಶ ನೀಡಲಾಗಿತ್ತು. ಆದರೆ, ಇದೀಗ ಕೊಳದಲ್ಲಿ ಹೂಳು ಯಥೇಚ್ಛವಾಗಿ ತುಂಬಿಕೊಂಡಿದ್ದರಿಂದ ಬೋಟಿಂಗ್ ಮಾಡಲು ಸಾಧ್ಯವಾಗುತ್ತಿಲ್ಲ. ಶೀಘ್ರವೇ ಹೂಳೆತ್ತಲು ಕ್ರಮಕೈಗೊಳ್ಳಲಾಗುವುದು’ ಎಂದು ರತ್ನಾ ತಿಳಿಸಿದರು.

‘ಹಬ್ಬದ ಸಮಯದಲ್ಲಿ ಅಗತ್ಯವಿದ್ದಲ್ಲಿ ಮಾತ್ರ ಬಿದಿರುಗಳನ್ನು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ವತಿಯಿಂದ ತೆರವು ಮಾಡಲಾಗಿತ್ತು. ಇನ್ನುಳಿದವುಗಳನ್ನು ತೆರವು ಮಾಡಲು ಟೆಂಡರ್ ಕರೆಯುವ ಯೋಜನೆ ಇದೆ’ ಎಂದು ಹೇಳಿದರು.


**ಪ್ರಜಾವಾಣಿ & ಸಿಟಿಜನ್ ಫಾರ್ ಸಿವಿಕ್ ಎಮಿನಿಟೀಸ್**
ಉತ್ತಮ ಬೆಂಗಳೂರಿಗಾಗಿ ಸಹಭಾಗಿತ್ವ



**ವಾರ್ಡ್ ಸಮಿತಿಗಳು: ನಿಮ್ಮ ಮನೆಬಾಗಿಲಿಗೇ ಪ್ರಜಾಪ್ರಭುತ್ವ**

ವರ್ಷದ ಹಿಂದೆ ಬಿಬಿಎಂಪಿ ರಚಿಸಿದ ವಾರ್ಡ್ ಸಮಿತಿಗಳು. ತಿಂಗಳಿಗೊಮ್ಮೆ ಸಭೆ ಸೇರುವ ಮೂಲಕ ಕಾರ್ಯಾರಂಭ ಮಾಡಿವೆ. ಸಾರ್ವಜನಿಕರು ಎದುರಿಸುತ್ತಿರುವ ವಿವಿಧ ರೀತಿಯ ಸಮಸ್ಯೆಗಳನ್ನು ನಾಗರಿಕ ಪ್ರತಿನಿಧಿಗಳು ಆಯಾ ಬಿಬಿಎಂಪಿ ವಾರ್ಡ್ ಕಚೇರಿಗಳಲ್ಲಿ ಗಮನಕ್ಕೆ ತಂದು ಚರ್ಚಿಸಿ ಪರಿಹಾರ ಕಂಡುಕೊಳ್ಳಲು ಈ ಸಮಿತಿಗಳು ವೇದಿಕೆ ಒದಗಿಸಲಿವೆ.

**ವಾರ್ಡ್ ಸಮಿತಿಗಳು : ಬೇರುಮಟ್ಟದ ಜನತಂತ್ರದತ್ತ ಅತ್ಯಗತ್ಯ ಹೆಜ್ಜೆ**
ಪರಿಣತರ ತಂಡದಿಂದ ಸಂವಾದ


**ಗಂಗಾಂಬಿಕೆ ಮಲ್ಲಿಕಾರ್ಜುನ್**
ಮಾನ್ಯ ಮಹಾಪೌರರು, ಬೆಂಗಳೂರು


**ಮಂಜುನಾಥ್ ಪ್ರಸಾದ್**
ಆಯುಕ್ತರು, ಬಿಬಿಎಂಪಿ


**ಶ್ರೀನಿವಾಸ್ ಅಲವಿಲ್ಲಿ**
ಸಹಸಂಸ್ಥಾಪಕರು, ಸಿಟಿಜನ್ಸ್ ಫಾರ್ ಬೆಂಗಳೂರು

ನೀವೆಲ್ಲರೂ ಈ ಚರ್ಚೆಯಲ್ಲಿ ಪಾಲ್ಗೊಳ್ಳಬೇಕೆಂದು ‘ಪ್ರಜಾವಾಣಿ’ ನಿಮ್ಮನ್ನು ಪ್ರೀತಿಯಿಂದ ಆಹ್ವಾನಿಸುತ್ತದೆ.

ಸ್ಥಳ: ದಿ ಚಾನ್ಸರಿ ಪೆವಿಲಿಯನ್ | ದಿನಾಂಕ: ಫೆಬ್ರುವರಿ 16, 2019 | ನೋಂದಣಿ: ಸಂಜೆ 4.30ರಿಂದ

ನೋಂದಣಿಗಾಗಿ ನಿಮ್ಮ ಹೆಸರು ಮತ್ತು ಸಂಪರ್ಕ ಸಂಖ್ಯೆಗಳನ್ನು civicissues@deccanherald.co.in ಇಲ್ಲಿಗೆ ಕಳಿಸಿಕೊಡಿ.

@deccanherald @deccanherald @deccanherald @deccanherald

ಈ ಕಾರ್ಯಕ್ರಮಕ್ಕೆ ಬೆಂಬಲ ಕೊಟ್ಟಿರುವ ನಾಗರಿಕ ಕ್ಷೇಮಾಭಿವೃದ್ಧಿ ಸಂಘಗಳು: • ಕುಮಾರ ಪಾರ್ಕ್ ಪಶ್ಚಿಮ • ಕಾಕ್ಸ್ ಟೌನ್ • ನೋಬಲ್ ರೆಸಿಡೆನ್ಸಿ ಲೇಔಟ್ • ಭುವನಗಿರಿ ವೆಲ್‌ಫೇರ್ ಅಸೋಸಿಯೇಷನ್ • ಎಸ್‌ಬಿಐ ಆಫೀಸರ್ಸ್ ಕಾಲೋನಿ • ಫ್ರೇಜರ್ ಟೌನ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ
ನಾಗರಿಕ ಸಂಘಟನೆಗಳು: • ಸಿಟಿಜನ್ಸ್ ಫಾರ್ ಬೆಂಗಳೂರು • ಸಿಟಿಜನ್ಸ್ ಆಕ್ಷನ್ ಫೋರಂ